# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ

ಪಿ. ಸಿ.ಆರ್. ನಂ.17/2023

ಸಿಡಬ್ಲ್ಯೂ-2

| | |
|---|---|
| ಹೆಸರುಃ | ಶ್ರೀಮತಿ ಪೂರ್ಣಿಮಾ |
| ಗಂಡನ ಹೆಸರುಃ | ದೇವೆಂದ್ರಪ್ಪ ನಾಯಿಕೊಡಿ |
| ವಯಸ್ಸುಃ | 38 ವರ್ಷ |
| ಉದ್ಯೋಗಃ | ಮನೆ ಕೆಲಸ |
| ವಾಸ ಸ್ಥಳಃ | ವಾಲ್ಮಿಕಿ ನಗರ, ಸೇಡಂ |

ದಿನಾಂಕ 04-08-2023

ಪ್ರಮಾಣ ವಚನ ಬೋಧಿಸಲಾಯಿತು.

## ಸಾಕ್ಷಿಯ ಪ್ರಮಾಣಿಕೃತ ಹೇಳಿಕೆ

**ವಿಚಾರಣೆಃ ನ್ಯಾಯಾಲಯದಿಂದ**

ದೇವಿಂದ್ರಪ್ಪ ನನ್ನ ಗಂಡ ಇರುತ್ತಾರೆ. ಈಗ 2 ತಿಂಗಳುಗಳ ಹಿಂದೆ ನಾನು ವಾಲ್ಮಿಕಿ ನಗರದ ನಮ್ಮ ಮನೆಯಲ್ಲಿ ಇದ್ದೆ. ಆಗ ಸುಮಾರು 1.30 ರಿಂದ 02.00 ಗಂಟೆಯ ಮಧ್ಯೆ ಚಂದ್ರಕಾಂತ ತಂದೆ ಸಾಯಿಬಣ್ಣ ನಾಯಿಕೋಡಿ, ಭಾಗ್ಯಲಕ್ಷ್ಮೀ ಗಂಡ ಚಂದ್ರಕಾಂತ, ಗಣೇಶ ತಂದೆ ಚಂದ್ರಕಾಂತ, ದಿನೇಶ ತಂದೆ ಚಂದ್ರಕಾಂತ, ಸಾವಿತ್ರಮ್ಮ ಗಂಡ ಸಾಯಿಬಣ್ಣ ಇವರು ನಮ್ಮ ಮನೆಗೆ ಬಂದು ನಾಳೆ 18 ನೇ ತಾರೀಖಿನಂದು ಪ್ರಕರಣದ ತೀರ್ಪು ಇರುತ್ತದೆ ನಿನ್ನ ಪರವಾಗಿ ಆದೇಶ ಆದ್ದಲ್ಲಿ ನಿಮ್ಮನ್ನು ಖಲ್ಲಾಸ ಮಾಡುತ್ತೇವೆ ಅಂತಾ ಅಂದಿರುತ್ತಾರೆ. ಆಗ ನಾನು ಗುಲಬರ್ಗಾಕ್ಕೆ ಹೋಗಿ ಎಸ್.ಪಿ. ಅವರಲ್ಲಿ ದೂರು ಸಲ್ಲಿಸಿರುತ್ತೇನೆ. ಅದಾದ ನಂತರ ನನಗೆ ಮೇಲಿಂದ ಮೇಲೆ ಅವರು ಜೀವ ದಮಕಿ ಹಾಕುತ್ತಾ ಬಂದಿದ್ದು ದಿನಾಂಕ 24.05.2023 ರಂದು ಸಾಯಂಕಾಲ 04.00 ರಿಂದ 04.30 ಗಂಟೆಗೆ 5 ಜನರು ಕೂಡಿಕೊಂಡು ಬಂದು ನನ್ನ ಗಂಡನಿಗೆ ಕಟ್ಟಿಗೆಯಿಂದ ಹೊಡೆದಿರುತ್ತಾರೆ. ಅವರು ನನ್ನ ಗಂಡನಿಗೆ ಕಟ್ಟಿಗೆಯಿಂದ ಕಾಲಿಗೆ ಹೊಡೆದಿರುತ್ತಾರೆ. ನಂತರ ನನ್ನ ಗಂಡ ಸೇಡಂ ಪಿ.ಎಸ್.ಐ. ಮತ್ತು ಸಿ.ಪಿ.ಐ. ರವರಿಗೆ ದೂರು ಕೊಟ್ಟಿರುತ್ತೇವೆ. ಅದೇ ರೀತಿ ಎಸ್.ಪಿ. ಅವರಿಗೂ ಸಹ ದೂರು ಕೊಟ್ಟಿರುತ್ತೇನೆ. ನಂತರ ದಿನಾಂಕ 26.05.2023 ರಂದು ಮೇಲೆ ಹೇಳಿದ ಜನರು ನಮ್ಮ ಬಳಿಗೆ ಬಂದು ತೀರ್ಪು ನಿಮ್ಮಂತೆ ಆಗಿರುತ್ತದೆ ನಮ್ಮ ಹೆಸರಿಗೆ ಮಾಡಿಕೊಡಿರಿ ಅಂತಾ ಅಂದಿರುತ್ತಾರೆ. ಅವರು ಜಮೀನು ಸಂಬಂಧ ನಮ್ಮೊಂದಿಗೆ ತಂಟೆ ಮಾಡಿರುತ್ತಾರೆ. ದಿನಾಂಕ 26.05.2023 ರಂದು ನನಗೆ ಅವರು ಕೈಯಿಂದ ಹೊಡೆದಿರುತ್ತಾರೆ. ಅವರು ನಮ್ಮ 39 ಎಕರೆ ಜಮೀನು ಮತ್ತು 3 ಬಿಲ್ಡಿಂಗಗಳನ್ನು ತೆಗೆದುಕೊಂಡು ನಮ್ಮ ಮೇಲೆ ದಬ್ಬಾಳಿಕೆ ಮಾಡಿರುತ್ತಾರೆ. ಆರೋಪಿತರು ನನ್ನ ಮಾವನಿಗೆ ದಬ್ಬಾಳಿಕೆ

ಮಾಡಿ ಕಿರುಕುಳ ನೀಡಿದ್ದರಿಂದ ಅವರು ಡೆತ್‌ನೋಟ್ ಬರೆದು ತೀರಿಕೊಂಡಿರುತ್ತಾರೆ.

ಆದ್ದರಿಂದ ಎದುರುದಾರರ ವಿರುದ್ಧ ಕಾನೂನು ರೀತಿ ಕ್ರಮ ಜರುಗಿಸಬೇಕು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ ದಂ. ಸೇಡಂ.

*SYH*